**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂ:595/2018

ಸಿ.ಡಬ್ಲ್ಯೂ-1 ಪಿ.ಡಬ್ಲ್ಯೂ-1

| | | |
|---|---|---|
| ಹೆಸರು | ಃ | ಇಂದಿರಾಬಾಯಿ |
| ತಂದೆಃಗಂಡ | ಃ | ಶಾಂತಪ್ಪ |
| ವಯಸ್ಸು | ಃ | 60 ವರ್ಷ |
| ಉದ್ಯೋಗ | : | ಮನೆಕೆಲಸ |
| ವಾಸಸ್ಥಳ | ಃ | ಬಸವನ ಸಂಗೋಳಗಿ |

ದಿನಾಂಕಃ14.02.2025
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-4 ನನ್ನ ಗಂಡ, ಚಾಸಾ-5, 6 ಮಕ್ಕಳು. 4 ವರ್ಷಗಳ ಹಿಂದೆ ನಮ್ಮ ಜಾಗದಲ್ಲಿ ಮನೆ ಕಟ್ಟಬೇಡ ಎಂದು ಹೇಳಿದ್ದರೂ ಸಹಿತ ಆರೋಪಿತರು ಬಂದು ನನಗೆ ಹೊಡೆದಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.28.06.2018 ರಂದು 12.30 ಗಂಟೆಗೆ ನಾನು, ಚಾಸಾ-4, 5 ರವರು ಮನೆಯಲ್ಲಿದ್ದಾಗ 1ನೇ ಆರೋಪಿಗೆ ನಮ್ಮ ಗೋಡೆಯ ಹತ್ತಿರ ಬಾಗಿಲು ಬಿಡಬೇಡ ಎಂದು ಹೇಳಿರುತ್ತೇವೆ ಎಂದರೆ ಸರಿ. ಆಗ 1ನೇ ಆರೋಪಿ ಚಾಸಾ-4 ರವರಿಗೆ ಅವಾಚ್ಯವಾಗಿ ಬೈದು ಬೋಸಡಿ ಮಗನೇ ನೀನ್ಯಾರು ಕೇಳಲು ಎಂದು ಹೇಳಿರುತ್ತಾರೆ ಎಂದರೆ ಸರಿ. ಆಗ ನಾನು ಕೇಳಲು ಹೋದಾಗ 2ನೇ ಆರೋಪಿ ನನಗೆ ಕೈ ಮುಷ್ಟಿ ಮಾಡಿ ಎಡಗಡೆ ಗದ್ದಕ್ಕೆ ಹೊಡೆದಿರುತ್ತಾರೆ ಎಂದರೆ ಸರಿ. ಆಗ ಚಾಸಾ-5 ರವರು ಜಗಳ ಬಿಡಿಸಲು ಬಂದಾಗ 3ಮತ್ತು 4ನೇ ಆರೋಪಿತರು ಅವರನ್ನು ನೆಲಕ್ಕೆ ಹಾಕಿ ಕಲ್ಲಿನಿಂದ ಅವನ ಬೆನ್ನ ಮೇಲೆ ಗುದ್ದಿರುತ್ತಾರೆ ಎಂದರೆ ಸರಿ. ಆಗ ಚಾಸಾ-6, 7 ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ನಂತರ ಚಾಸಾ-5 ರವರನ್ನು ಕಲಬುರಗಿ ಸರ್ಕಾರಿ ಆಸ್ಪತ್ರೆಗೆ ಹೋಗಿ ದಾಖಲು ಮಾಡಿರುತ್ತೇವೆ ಎಂದರೆ ಸರಿ. ನಾನು ಆಸ್ಪತ್ರೆಯಲ್ಲಿ ಪೋಲಿಸರ ಮುಂದೆ ಹೇಳಿಕೆ ನೀಡಿ ಹೆಬ್ಬಟ್ಟಿನ ಗುರುತು ಮಾಡಿರುತ್ತೇನೆ ಎಂದರೆ ಸರಿ. ದೂರನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಎರಡು ಕಲ್ಲು ತೋರಿಸಿ ಸದರಿ ಕಲ್ಲುಗಳಿಂದ 3 ಮತ್ತು 4ನೇ ಆರೋಪಿತರು ಚಾಸಾ-5 ರವರಿಗೆ ಹೊಡೆದಿರುತ್ತಾರೆ ಎಂದು ಗುರುತಿಸಿದ್ದರಿಂದ ಅವುಗಳನ್ನು ಒಟ್ಟಾಗಿ ಮು.ಮಾ.1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ**

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದುಡಲಾಯಿತು)

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.